'ಆ ಕರಿಯ ಮನೆಗೇನಾದ್ರೂ ತಂದು ಹಾಕ್ತಾನೊ, ಇಲ್ಲ ಮನೆ ಬಿಟ್ಟು ಹೋಗ್ತಾನೋ ಕೇಳು. ಏನೋ ಪರದೇಶಿ, ತಿಂದುಕೊಂಡು ಇರಲಿ ಅಂತಿದ್ರೆ ಅವನಿಗೇನು ಜವಾಬ್ದಾರೀನೆ ಇಲ್ಲ' ಎಂದು ಬಿಳಿಅಜ್ಜ ಹೇಳಿದಾಗ, ಚಂದ್ರೂ 'ಆಗ್ಲಜ್ಜ' ಎಂದು ಪಾಠಶಾಲೆಗೆ ಹೊರಟ. ಪಾಠಶಾಲೆಗೆ ಹೋಗುವಾಗ ಪಾಣಿಪಂಚೆ ಉಟ್ಟುಕೊಂಡು, ಇನ್ನೊಂದು ಪಾಣಿಪಂಚೆ ಹೊದ್ದುಕೊಂಡು ಹಣೆಗೆ ವಿಭೂತಿ ಹಚ್ಚಿಕೊಂಡು ಹೋಗುತ್ತಿದ್ದ ಚಂದ್ರು 'ಕರಿಅಜ್ಜನಿಗೆ ಹೇಗೆ ಹೇಳುವುದು' ಎಂದು ಯೋಚಿಸಿದ. ಕರಿಅಜ್ಜ ದೆವ್ವನ ಹಾಗೆ ಬೆಳೆದಿದ್ದ. ಬಿಳಿಪಂಚೆ ಬಿಳಿಜುಬ್ಬದ ಕರಿಯಜ್ಜ ಇದ್ದಲಿಯಷ್ಟು ಕಪ್ಪಾಗಿದ್ದ. ಕರಿಅಜ್ಜನಿಗೆ ಊರಿನವರೆಲ್ಲಾ ಹೆದರುತ್ತಿದ್ದರು.

ಪಾಠಶಾಲೆಯಿಂದ ಮನೆಗೆ ಬಂದಾಗ ಚಂದ್ರೂ ವಿಭೂತಿಯನ್ನು ಅಳಿಸಿಕೊಂಡು, ಚಡ್ಡಿಹಾಕಿಕೊಂಡು, ಷರಟನ್ನು ಒಳಗೆ ಸಿಕ್ಕಿಸಿ ಮಿಡ್ಲ್‌ಸ್ಕೂಲಿಗೆ ಹೋದ. ಮಧ್ಯಾಹ್ನ ಊಟಕ್ಕೆ ಬಂದು ಮತ್ತೆ ಸ್ಕೂಲಿಗೆ ಹೋಗಿ ಅವನು ಸಂಜೆಯ ಹೊತ್ಗೆ ಮನೆಗೆ ಬಂದ. ಊರಿನ ಮಧ್ಯದಲ್ಲಿ ತಗ್ಗಿನಲ್ಲಿತ್ತು ಅವನ ಅಜ್ಜನ ಮನೆ. ಉಣುಗೋಲು ತೆಗೆಯದೆ ಎರಡು ಕೋಲುಗಳ ಸಂದಿಯಲ್ಲಿ ನುಸುಳಿ, ಹನ್ನೆರಡು ಮೆಟ್ಟಿಲಿಳಿದು ಚಂದ್ರು ಅಂಗಳಕ್ಕೆ ಬಂದಾಗ ಎದುರಿಗಿದ್ದ ಎತ್ತಿನಕೊಟ್ಟಿಗೆ ಖಾಲಿ ಖಾಲಿಯಾಗಿ ಕಂಡಿತು. ಕಿರುಜಗುಲಿಯಲ್ಲಿ ಕರಿಅಜ್ಜ ಲಾಟೀನು ಬುಡ್ಡಿ ಒರೆಸಿ ದೀಪ ಹಚ್ಚುತ್ತಿದ್ದ. ಪಡಸಾಲೆಯ ಮೂಲೆಯಲ್ಲಿ ತನ್ನ ಪುಸ್ತಕಗಳನ್ನಿಟ್ಟು, ಚಂದ್ರು ಕಾಲು ತೊಳೆಯಲಿಕ್ಕೆ ಬಚ್ಚಲು ಮನೆಗೆ ಹೊರಟ. ನಡುಮನೆಯ ನಾಗೊಂದಿಗೆಯ ಮೇಲೆ ಬಿಳಿಅಜ್ಜ ಕುಡುಗೋಲು ಇಡುತ್ತಿದ್ದ. ಚಂದ್ರು ನಡುಮನೆಯಲ್ಲಿ ಉರಿಯುತ್ತಿದ್ದ ಚಿಮಣಿಬುಡ್ಡಿಯಿಂದ ಇನ್ನೊಂದು ಚಿಮಣಿಬುಡ್ಡಿಯನ್ನು ಹತ್ತಿಸಿಕೊಂಡು ಬಚ್ಚಲಿಗೆ ಹೋದ. ಎಡಗಡೆ ಬಚ್ಚಲಿದ್ದರೆ, ಬಲಗಡೆ ಎಮ್ಮೆಕೊಟ್ಟಿಗೆಯಲ್ಲಿ ಅಜ್ಜಿ ಹಾಲುಕರೆಯುತ್ತಿದ್ದಳು. ಚಂದ್ರು ಕೈಕಾಲು ತೊಳೆದುಬರುವ ಹೊತ್ತಿಗೆ ಬಿಳಿಅಜ್ಜ ದೇವಸ್ಥಾನಕ್ಕೆ ಹೊರಟಿದ್ದ. ಬಿಳಿಅಜ್ಜ ಹೊರಟ ಸ್ವಲ್ಪ ಹೊತ್ತಿಗೆ ಕರಿಅಜ್ಜನೂ ಹೊರಟ. ಕರಿಅಜ್ಜ ಇದ್ದಿನಬ್ಯಾರಿ ಅಂಗಡಿ ಹಿಂದಿನ ಕೋಣೆಗೆ ಹೋಗುತ್ತಾನೆಂದು ಚಂದ್ರುವಿಗೆ ಗೊತ್ತಿತ್ತು. ಅಲ್ಲಿ ನಾಲ್ಕಾರು ಜನ ಇಸ್ಪೀಟ್ ಆಡುವುದನ್ನು ಚಂದ್ರು ನೋಡಿದ್ದ.

ಅಜ್ಜಿ ಹಾಲುಕರೆದು ಕಾಯಿಸಿಟ್ಟು, ಅನ್ನ ಮಾಡಿಟ್ಟು ಬರುವ ಹೊತ್ತಿಗೆ ಚಂದ್ರು ಪಗಡೆಕಾಯಿಗಳನ್ನಿಟ್ಟುಕೊಂಡು ಕಾದಿದ್ದ. ಅಜ್ಜಿ ಬಂದ ಕೂಡಲೆ ಸೀಮೆಸುಣ್ಣದಿಂದ ನೆಲದ ಮೇಲೆ ಪಗಡೆಹಾಸನ್ನು ಬರೆದ. ಯಾರು ಆಟವನ್ನು ಶುರು ಮಾಡಬೇಕೆಂದು ಅಜ್ಜಿ ಮೊಮ್ಮಗ ಚರ್ಚಿಸುತ್ತ ದಾಳಗಳನ್ನು ಮೊಮ್ಮಗನಿಗೆ ಒಗೆದರು. ಅಜ್ಜಿಗೆ ಮೂರು ಒಂದು ಬಿದ್ದರೆ ಮೊಮ್ಮಗನಿಗೆ ಹನ್ನೆರಡು ಬಿದ್ದಿತ್ತು. ಚಂದ್ರೂನೆ ಆಟವನ್ನು ಪ್ರಾರಂಭಿಸಿದ. ಅಜ್ಜಿಗೆ ಗರಬೀಳುವುದನ್ನು ನೋಡಿ ಆಶ್ಚರ್ಯವಾಗುತ್ತೆ. ಅವನ ಕಾಯಿಗಳನ್ನು ಹೊಡೆದೂ ಹೊಡೆದು ಅಜ್ಜಿ ತನ್ನಕಾಯಿಗಳನ್ನು ಹಣ್ಣುಮಾಡಿಬಿಟ್ಟಳು. ಚಂದ್ರೂಗೆ ಅಳು ಬಂತು. 'ನಾಳೆ ನಿನ್ನನ್ನ ಸೋಲ್ಸೇ ಬಿಡ್ತೀನಿ' ಅಂದ. ಅಷ್ಟು ಹೊತ್ತಿಗೆ ಉಣುಗೋಲಿನ ಹತ್ತಿರ ಟಾರ್ಚಿನ ಬೆಳಕು ಕಾಣಿಸಿತು. ಚಂದ್ರು ಪಗಡೆಕಾಯಿಗಳನ್ನು ತೆಗೆದಿಡುತ್ತ 'ಕರಿಅಜ್ಜ ಬಂದ' ಎಂದ. ಅಜ್ಜಿ ಅಡಿಗೆಮನೆಗೆ ಹೋಗಿ ಹಲಸಿನ ಹಪ್ಪಳ ಸುಡುತ್ತ ಕೂತಳು.

ಕರಿಅಜ್ಜ ಕೈಕಾಲು ತೊಳೆದು ಪಾಣಿಪಂಚೆಯಿಂದ ಒರೆಸಿಕೊಳ್ಳುತ್ತ ಕಿರುಜಗುಲಿಯಲ್ಲಿ ತನ್ನ ಮಂಚದ ಮೇಲೆ ಕೂತುಕೊಂಡು 'ಏನಯ್ಯ ಪುಟ್ಟ?' ಎಂದ. 'ಏನೂ ಇಲ್ಲಜ್ಜ' ಎಂದ ಚಂದ್ರು 'ಊಟ ಆಯ್ತ?' 'ಇಲ್ಲಜ್ಜ' 'ನಡೀ ಊಟ ಮಾಡೋಣ.' ಚಂದ್ರು ಎದ್ದು ಅಡಿಗೆ ಮನೆಗೆ ಹೋಗಿ ಎರಡು ಬಳ್ಳೆ ಹಾಕಿ, ಮಣೆ ಇಟ್ಟ. ಅಜ್ಜಿ ಬಡಿಸಿದಳು. ಕರಿಅಜ್ಜ ದೋಸೆ ತಿಂದ.